ಸಾಕ್ಷಿಯನ್ನು ದಿನಾಂಕ **19-01-2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ. ವಿ.ಬಿ.ಎನ್ ವಕೀಲರಿಂದಃ

ನಾನು ಬಿ.ಎ ಪದವಿ ವ್ಯಾಸಂಗ ಮಾಡಿರುತ್ತೇನೆ. ನಾನು ಸಬ್ಸಿಡಿ ಸ್ಕೀಮ್ ನಲ್ಲಿ ಪಂಪ್ ಸೆಟ್ ಮತ್ತು ವಿದ್ಯುತ್ ಸಂಪರ್ಕ ಕೇಳಿದ್ದೆ ಎಂದರೆ ಸರಿ. ಆ ರೀತಿ ಸಬ್ಸಿಡಿ ಯೋಜನೆಯಡಿ

ಸಂಪರ್ಕ ಕಲ್ಪಿಸಿದರೆ ವಾಣಿಜ್ಯ ಬೆಳೆಗಳಿಗೆ ಉಪಯೋಗಿಸುವಂತಿಲ್ಲ ಎಂದರೆ ಸರಿ. ನಾನು ಪಂಪ್ ಸೆಟ್ ಸಂಪರ್ಕವನ್ನ ಪಡೆದು ಬತ್ತದ ಬೆಳೆ ಮಾತ್ರ ಬೆಳೆಯುತ್ತಿದ್ದೇನೆ. ಸರ್ವೆ ನಂಬರ್ 12/2 ಮತ್ತು 10/2 ಕ್ಕೆ ವಿದ್ಯುತ್ ಸಂಪರ್ಕ ಕೇಳಿ ನಾನು ಅರ್ಜಿಯಲ್ಲಿ ನಮೂದಿಸಿದ್ದೆ. ನಾನು ಅರ್ಜಿಯಲ್ಲಿ ಸದರಿ ಸರ್ವೆ ನಂಬರ್ ಗಳನ್ನ ನಮೂದಿಸಿಲ್ಲ ಆದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. 12/2 ಎಂದು ಸರ್ವೆ ನಂಬರನ್ನ ನಾನು ಪಿರ್ಯಾದಿನಲ್ಲಿ ಬರೆಸಿಲ್ಲ ಆದರೆ ಅದು 11/2. ಅರ್ಜಿ ಕೊಡುವ ಮೊದಲಿಗೆ ನಾನು ಗುತ್ತಿಗೆದಾರರ ಮೂಲಕ ಎಷ್ಟು ಖರ್ಚು ವೆಚ್ಚ ಆಗುತ್ತದೆ ಎಂದು ಅಂದಾಜು ಮಾಡಿಸಲಿಲ್ಲ. ನಾನು ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿದ ಅರ್ಜಿ ನ್ಯಾಯಾಲಯದಲ್ಲಿ ಗುರುತಿಸಿದ್ದೇನೆ. ಅದು ನಿಪಿ-4 ರಲ್ಲಿ ಪುಟ 119 ರಲ್ಲಿ ಲಭ್ಯವಿದೆ. ಸದರಿ ಅರ್ಜಿಯಲ್ಲಿ ನಾನು 11/2 ಕ್ಕೆ ಮಾತ್ರ ವಿದ್ಯುತ್ ಸಂಪರ್ಕ ಕೇಳಿದ್ದೇನೆ ಎಂದರೆ ಸರಿಯಲ್ಲ. ಜಮೀನು ನನಗೆ ಸೇರಿದ್ದರೆ ಮಾತ್ರ ಸ್ಥಾವರದ ಸಂಪರ್ಕ ಕಲ್ಪಿಸಿಕೊಡಲು ಸಾಧ್ಯ ಎಂದರೆ ಸರಿ. ಸರ್ವೆ ನಂಬರ್ 11/2 ನಾವು ಮೂವರು ಅಣ್ಣ ತಮ್ಮಂದಿರ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ. ಸದರಿ ಪಹಣಿಯಲ್ಲಿ ಎಷ್ಟು ವಿಸ್ತೀರ್ಣ ಎಂದು ನಮೂದಿಸಿಲ್ಲ ಬೆಳೆ ಮಂದಣ್ಣ ರವರ ಹೆಸರಿನ ಮುಂದೆ ಬತ್ತ ಎಂದು ನಮೂದಿಸಿದೆ ಎಂದರೆ ಸರಿ. ನನ್ನ ಹೆಸರಿನ ಮುಂದೆ ಬೆಳೆ ಬಗ್ಗೆ ಮಾಹಿತಿ ಇಲ್ಲ ಎಂದು ಬರೆದಿದೆ ಎಂದರೆ ಸರಿ. ಸರ್ವೆ ನಂಬರ್ 11/2 ನಾವು ಅಣ್ಣ ತಮ್ಮಂದಿರು ಮೂವರ ಜಂಟಿ ಖಾತೆ ಇದೆ ಎಂದರೆ ಸರಿ. ನಾನು ನನ್ನ ಅಣ್ಣ ತಮ್ಮಂದಿರಿಂದ NOC ಪಡೆದಿಲ್ಲ ನನ್ನ ಪಾಲಿಗೆ ಬಂದಿದ್ದಕ್ಕೆ ಮಾತ್ರ ಕೇಳಿದ್ದೇನೆ. ಪಹಣಿ ಪ್ರಕಾರ ನನ್ನ ಪಾಲಿಗೆ ಎಷ್ಟು ಬಂದಿದೆ ಎಂಬುದರ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ನಿರಾಪೇಕ್ಷಣ ಪತ್ರದಲ್ಲಿ ಸರ್ವೆ ನಂಬರ್ 10/2 ನಮೂದಾಗಿಲ್ಲ ಎಂದರೆ ಸರಿ. ನಿರಾಪೇಕ್ಷಣ ಪತ್ರದಲ್ಲಿ ಬಾವಿಯ ಸುತ್ತಳತೆ ಮತ್ತು ನೀರಿನ ಪ್ರಮಾಣ ನಮೂದಿಸಿಲ್ಲ ಎಂದರೆ ಸರಿ. ಅರ್ಜಿ ಸಲ್ಲಿಸುವಾಗ ಪ್ರತ್ಯೇಕವಾಗಿ ಬಾವಿಯ ಸಂಬಂಧ ದೃಡೀಕರಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ದಾಖಲೆ ನೋಡಿದ ತಕ್ಷಣ ಸಾಮಾನ್ಯರಿಗೂ ಸಹ ನಾನು ಸದರಿ ಸರ್ವೆ ನಂಬರ್ ನ ಸಂಪೂರ್ಣ ಮಾಲಿಕ ಎಂದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ.

ಪ್ರಪ್ರಥಮವಾಗಿ ನಾನು ದಿನಾಂಕ 28.04.2018 ರಂದು ಭಾಗಮಂಡಲದ ಜೆ ಇ ಕಛೇರಿಯಲ್ಲಿ ಅರ್ಜಿ ಕೊಟ್ಟಿರುತ್ತೇನೆ. ಅರ್ಜಿಯನ್ನ ಪರವಾನಗಿ ಪಡೆದಿರುವ ಗುತ್ತಿಗೆದಾರರ ಮೂಲಕ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ನಾನು ಗಿರೀಶ್ ಎಂಬ ಗುತ್ತಿಗೆದಾರರ ಮೂಲಕ ಅರ್ಜಿ ಸಲ್ಲಿಸಿರುತ್ತೇನೆ. ಗಿರೀಶ್ ಮತ್ತು ನನ್ನ ನಡುವೆ ಯಾವುದೇ ಕರಾರು ಪತ್ರ ಆಗಿರಲ್ಲಿಲ್ಲ ಆದರೆ ಬಾಯಿ ಮಾತಿನ ಮೂಲಕ ತೀರ್ಮಾನ ಆಗಿತ್ತು. ಬಾಯಿ ಮಾತಿನ

ಮೂಲಕವೂ ಸಹ ಯಾವ ದಿನಾಂಕದೊಳಗೆ ಕಾರ್ಯ ಮುಗಿಸುತ್ತೇನೆ ಎಂಬ ಬಗ್ಗೆ ಇನ್ನು ತೀರ್ಮಾನ ಆಗಿರಲಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ದಿನಾಂಕ 04.01.2019 ರಂದು ತಯಾರಿಸಿದಂತೆ ಕಾಣಿಸುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. 19 ನೇ ಸಾಲು ಎಂಬುದು ಕಾಣಿಸುತ್ತದೆ ಎಂದರೆ ಸರಿ. ದಿನಾಂಕ 01.12.2018 ರಿಂದ 30.12.2018 ರೊಳಗೆ ಕೆಲಸ ಮುಗಿಸುವಂತೆ ಒಪ್ಪಂದ ಮಾಡಿಕೊಂಡಿರುವ ರೀತಿ ಬರೆದಿದೆ ಎಂದರೆ ಸರಿ. ಸದರಿ ದಾಖಲೆಯನ್ನ ಸಾಕ್ಷಿ ಒಪ್ಪಿದ್ದರಿಂದ ನಿಡಿ-**1** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಪಹಣಿ ಪತ್ರಗಳು ಸರ್ವೆ ನಂಬರ್ 11/2 ಇದ್ದು ನನ್ನ ಹೆಸರಿಗೆ ಖಾತೆ ಇವೆ ಎಂದರೆ ಸರಿ. ಸದರಿ ಪಹಣಿಗಳನ್ನು ನಿಡಿ-**2** ಎಂದು ಗುರುತಿಸಲಾಯಿತು. ಸದರಿ ಪಹಣಿಗಳಲ್ಲಿ 2021-2022 ನೇ ಸಾಲಿನಿಂದ ಬೆಳೆ ಕಾಫಿ ಬೆಳೆ ಎಂದು ತೋರಿಸಲಾಗಿದೆ ಎಂದರೆ ಅದು ಕೈತಪ್ಪಿನಿಂದ ಬರೆದಿದ್ದಾರೆ. ಬೆಳೆಗಳನ್ನ ಕೈತಪ್ಪಿನಿಂದ ಬರೆದಿಲ್ಲ ಆದರೂ ನಾನು ಮಾಡಿರುವ ತಪ್ಪನ್ನ ಮುಚ್ಚಿಡಲು ಕೈತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಪಹಣಿ ಸರ್ವೆ ನಂಬರ್ 10/1 ನನ್ನ ಹೆಸರಿಗೆ ಇರುತ್ತದೆ. ಸದರಿ ಪಹಣಿಯನ್ನ ನಿಡಿ-**3** ಎಂದು ಗುರುತಿಸಲಾಯಿತು. ಅದರಲ್ಲಿಯೂ ಸಹ ಬೆಳೆ ಕಾಫಿ ಬೆಳೆ ಎಂದು ತೋರಿಸಿದೆ ಎಂದರೆ ಕೈತಪ್ಪಿನಿಂದ ಆ ರೀತಿ ತೋರಿಸಿದ್ದಾರೆ. ಸರ್ವೆ ನಂಬರ್ 12/2 ನನ್ನ ಹೆಸರಿಗೆ ಇರುವುದಿಲ್ಲ.

ಮೇಲೆ ಹೇಳಿದ ಜಮೀನುಗಳಲ್ಲದೆ ನನಗೆ ಯಾವುದೇ ಬೇರೆ ಪ್ರತ್ಯೇಕ ಕಾಫಿ ತೋಟ ಇರುವುದಿಲ್ಲ. ನಾನು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟು ವಿದ್ಯುತ್ ಸಂಪರ್ಕ ಪಡೆಯಲು ಪ್ರಯತ್ನ ಪಟ್ಟೆ ಎಂದರೆ ಸರಿಯಲ್ಲ. ನಾನು ಭಾಗಮಂಡಲದ ಕಿರಿಯ ಅಭಿಯಂತರರ ಬಳಿ ಅರ್ಜಿ ಕೊಟ್ಟಿಲ್ಲ, ಆದರೆ ಮಡಿಕೇರಿಯ ಸಹಾಯಕ ಅಭಿಯಂತರರು, ತಾಂತ್ರಿಕ ವಿಭಾಗ ಇಲ್ಲಿ ನಾನು ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯನ್ನ ಮಡಿಕೇರಿಯಿಂದ ಸ್ಥಳಪರಿಶೀಲನೆಗಾಗಿ ಭಾಗಮಂಡಲ ಕಛೇರಿಗೆ ಕಳುಹಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಭಾಗಮಂಡಲ ಕಛೇರಿಯಲ್ಲಿ ಕಿರಿಯ ಅಭಿಯಂತರರನ್ನ ಬೇಟಿ ಮಾಡಿದ್ದೇನೆ. ಒಮ್ಮೆ ಮಾತ್ರ ಬೇಟಿ ಮಾಡಿದ್ದೆ, ಸ್ಥಳ ಪರಿಶೀಲನೆ ನಿಬಂಧನೆಗೂ ಸಹ ನಾನು ಅವರ ಜೊತೆ ಇದ್ದೆ. ಸ್ಥಳ ಪರಿಶೀಲನೆಗೆ ಯಾವ ದಿನ ಬಂದಿದ್ದರು ಎಂದು ಜ್ಞಾಪಕದಲ್ಲಿ ಇಲ್ಲ. ಸ್ಥಳ ಪರಿಶೀಲನೆ ಸಮಯದಲ್ಲಿ ನಾನು ಕೊಟ್ಟಿದ್ದ ಅರ್ಜಿ ಮತ್ತು ನಿರಾಪೇಕ್ಷಣ ಪತ್ರ ಇದರ ಆಧಾರದ ಮೇಲೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಇಲಾಖೆಯವರು ಅವಶ್ಯಕ ದಾಖಲೆಗಳನ್ನ ಕೇಳಿದ್ದಾರೆ ನಾನು ಅವುಗಳನ್ನ ಪೂರೈಸಿಲ್ಲ ಎಂದರೆ ಸರಿಯಲ್ಲ. ನಂತರ ನಾನು ಭಾಗಮಂಡಲದ ಕಿರಿಯ ಅಭಿಯಂತರರ

ಮೇಲೆ ಒತ್ತಡ ಹಾಕಿ ಮಡಿಕೇರಿಯ ಕಛೇರಿಗೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಮಡಿಕೇರಿಗೆ ಬಂದ ನಂತರ ನಾನು ಸಹಾಯಕ ಅಭಿಯಂತರರು, ತಾಂತ್ರಿಕ ಇವರನ್ನ ಬೇಟಿ ಮಾಡಿದ್ದೇನೆ. ದೂರು ಕೊಡುವ ಮೊದಲಿಗೆ ಆರೋಪಿಯನ್ನ ಒಮ್ಮೆ ಬೇಟಿ ಮಾಡಿದ್ದೆ. ನಾನು ಕಿರಿಯ ಅಭಿಯಂತರರು ಭಾಗಮಂಡಲ ಮತ್ತು ಸಹಾಯಕ ಅಭಿಯಂತರರು ತಾಂತ್ರಿಕ, ಮಡಿಕೇರಿ ಇವರ ಜೊತೆ ಸಂಭಾಷಣೆ ಮಾಡಿದಾಗ ಅದನ್ನ ನಾನು ರೆಕಾರ್ಡ್ ಮಾಡಿಕೊಂಡಿರುವುದಿಲ್ಲ. ನನ್ನ ದಾಖಲೆಗಳ ಆಧಾರದ ಮೇಲೆ ನನಗೆ ಸಂಪರ್ಕ ಸಿಗುವುದಿಲ್ಲ ಎಂದು ತಿಳಿದು ನಾನು ಒಂದು ಸಂಭಾಷಣೆಯನ್ನ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ಅರ್ಜಿ ಸಲ್ಲಿಸಿರುವುದರಿಂದ ಪಿರ್ಯಾದು ಸಲ್ಲಿಸಿರುವುದರ ವರೆಗೆ ಎಷ್ಟು ವೆಚ್ಚ ಖರ್ಚು ಆಗಿದೆ ಎಂಬುದನ್ನ ನಾನು ಗುತ್ತಿಗೆದಾರರ ಮೂಲಕ ತಿಳಿಸಿದ್ದೇನೆ ಅವರು 10,110/- ರೂ ಖರ್ಚಾಗಿದೆ ಎಂದು ತಿಳಿಸಿದರು. ನಾನು ಇಲಾಖೆಗೆ ಒಟ್ಟು ಇಪ್ಪತ್ತ ಮೂರು ಸಾವಿರ ಚಿಲ್ಲರೆ ತುಂಬಿದ್ದೇನೆ ಎಂದರೆ ಜ್ಞಾಪಕದಲ್ಲಿ ಇಲ್ಲ. ನಾನು 4 ರಶೀದಿಯಲ್ಲಿ ತೋರಿಸಿರುವ ಹಣ ಅಂದರೆ 20,032/- ರೂ ತುಂಬಿದ್ದೇನೆ ಎಂದರೆ ಜ್ಞಾಪಕದಲ್ಲಿ ಇಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ 20,032/- ರೂ ಎಂದು ಬರೆದಿದೆ ಎಂದರೆ ನನಗೆ ಜ್ಞಾಪಕದಲ್ಲಿ ಇಲ್ಲ. ನನಗೆ ಎಲ್ಲಾ ಜ್ಞಾಪಕ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಜ್ಞಾಪಕ ಇಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪುಟ 88 ರಲ್ಲಿರುವ ದಾಖಲೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 16.11.2018 ರಂದು ಆರೋಪಿಯ ಕಛೇರಿಗೆ ಹೋದ ಬಗ್ಗೆ ನಾನು ವಿಜಿಟರ್ಸ್ ಬುಕ್ ನಲ್ಲಿ ಸಹಿ ಮಾಡಿಲ್ಲ. ಆ ಸಂದರ್ಭದಲ್ಲಿ ನಾನು ಆರೋಪಿಯ ಬಳಿ ಯಾವ ಯಾವ ಖಾತೆಗೆ ಹಣ ತುಂಬಬೇಕು ಎಂದು ಮಾಹಿತಿ ಪಡೆದಿಲ್ಲ. ಪಿರ್ಯಾದು ಕೊಡುವವರೆಗೂ ಸಹ ಯಾವುದೇ ಖಾತೆಗೆ ಹಣ ತುಂಬಿಸಿರಲಿಲ್ಲ ಎಂದರೆ ಸರಿ. ನನ್ನ ಕೆಲಸ ಪೂರ್ತಿಯಾಗಲು ಇಲಾಖೆಗೆ ಕಾನೂನು ಬದ್ಧ ಹಣ ತುಂಬಬೇಕು ಎಂಬ ಮಾಹಿತಿ ನನಗೆ ಇತ್ತು. ಸದರಿ ಕಾನೂನು ಬದ್ಧ ಹಣವನ್ನ ತುಂಬುವುದನ್ನ ತಪ್ಪಿಸಿಕೊಳ್ಳಲು ನಾನು ಎಸಿಬಿ ಯವರಿಗೆ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ 10,000/- ಕೇಳಿದ್ದ ಬಗ್ಗೆ ಅದೇ ದಿನ ನಾನು ರೆಕಾರ್ಡ್ ಮಾಡಿ ಕೊಂಡಿದ್ದೇನೆ. ನಾನು ರೆಕಾರ್ಡ್ ಮಾಡಿಕೊಂಡ 5 ದಿನಗಳ ಕಾಲ ಯಾಕೆ ಪಿರ್ಯಾದು ಕೊಡಲಿಲ್ಲ ಎಂಬ ಬಗ್ಗೆ ಕಾರಣವನ್ನ ಪಿರ್ಯಾದಿನಲ್ಲಿ ಬರೆಸಿಲ್ಲ. ಆರೋಪಿ ನನ್ನ ಬಳಿ

10,000 ರೂ ಹಣ ಕೇಳಿಲ್ಲ ಆದರೂ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದನ್ನ ಎಸಿಬಿ ಕಛೇರಿಯಲ್ಲೆ ಬೆರಳಚ್ಚು ಮಾಡಿಸಲಾಗಿದೆ ಎಂದರೆ ಸರಿಯಲ್ಲ. ನಾನು ಎಲ್ಲಿ ಬೆರಳಚ್ಚು ಮಾಡಿಸಿದೆ ಎಂದು ಹೇಳಲು ಆಗುವುದಿಲ್ಲ. ನಾನು ಎಸಿಬಿ ಕಛೇರಿಯಲ್ಲೆ ಬೆರಳಚ್ಚು ಮಾಡಿಸಿದ್ದೆ ಆದ್ದರಿಂದ ಎಲ್ಲಿ ಮಾಡಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಪಿರ್ಯಾದನ್ನ ಪಂಚರಿಗೆ ಓದಲು ಕೊಟ್ಟಿಲ್ಲ ಆದರೂ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 10,000/- ರೂ ಕೇಳಿದ್ದು ಅದರಲ್ಲಿ 7,500/- ರೂಗೆ ಸೆಟಲ್ ಆಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೊಬೈಲ್ ನಲ್ಲಿದ್ದ ಸಂಭಾಷಣೆಯನ್ನ ಯಾರು ಸಿಡಿ ಗೆ ವರ್ಗಾಯಿಸಿದರು ಎಂದು ನೆನಪಿಲ್ಲ. ನಾನು ಹಾಜರುಪಡಿಸಿದ ಚಿಪ್ಪು ನನ್ನ ಮೊಬೈಲಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಪಿ-7 ನ್ನ ಪೊಲೀಸರು ಪಿರ್ಯಾದಿನಲ್ಲಿರುವ ಸಂಗತಿ ಸರಿಯಾಗಿದೆ ಎಂದು ತೋರಿಸಲು ಪಡೆದಿರುತ್ತಾರೆ. ನಿಪಿ-7 ನ್ನ ಪೊಲೀಸರು ಟೈಪ್ ಮಾಡಿ ನನ್ನಿಂದ ಸಹಿ ಪಡೆದಿದ್ದಾರೆ ಎಂದರೆ ಸರಿ.

ನನಗೆ ಯಾವುದೇ voice record ನ್ನ ಕೊಟ್ಟಿಲ್ಲ ಮತ್ತು ಟ್ರ್ಯಾಪ್ ಸಮಯದಲ್ಲಿ ನಾನು ಅದನ್ನ ರೆಕಾರ್ಡ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನ ಬೆರಳಚ್ಚು ಮಾಡಲು ಯಾರು ಉಕ್ತಲೇಖನ ನೀಡಿದರು ಎಂದು ನೆನಪಿಲ್ಲ. ಪೊಟೋಗಳನ್ನ ಸಿಬ್ಬಂದಿ ತೆಗೆದರು ಆದರೆ ಅವರ ಹೆಸರು ಗೊತ್ತಿಲ್ಲ. ನಿಪಿ-2 ನ್ನ ನನ್ನ ಸಮಕ್ಷಮ ಮಾಡಿಲ್ಲ ಅದನ್ನ ಈ ಕೇಸಿಗೊಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಆರೊಪಿಯ ಕಛೇರಿಯ ಒಳಗಡೆ ಹೋದಾಗ ಮಧ್ಯಾಹ್ನ 1-15 ಆಗಿತ್ತು. ನಾನು ಕಛೇರಿ ಒಳಗಡೆ ಹೋದಾಗ ತುಂಬ ಜನ ಇದ್ದರು. ನಾನು ಅಲ್ಲಿ 10 ರಿಂದ 15 ನಿಮಿಷಗಳ ಕಾಲ ಕಾದೆ. ನಾನು ಕಛೇರಿಯ ಒಳಗಡೆ ಹೋದಾಗ ತುಂಬ ಜನ ಮಾತನಾಡುತ್ತಿದ್ದರು. ಟ್ರ್ಯಾಪ್ ಮಹಜರು ಕಾಲಕ್ಕೆ ಆರೋಪಿ ಹಣ ತಂದಿದ್ದೀರ ಎಂದು ಕೇಳಿದ್ದರು ಎಂದು ನಾನು ಹೇಳಿ ಬರಸಿದ್ದೆನೊ ಎಂದು ಈಗ ನನಗೆ ಜ್ಞಾಪಕದಲ್ಲಿ ಇಲ್ಲ. Voice record ನಲ್ಲಿ ಆರೋಪಿ ಹಣ ತಂದಿದ್ದೀರ ಎಂದು ಕೇಳಿರುವುದು ರೆಕಾರ್ಡ್ ಆಗಿದೆ. ಪೊಲೀಸರು ಅದೇ ದಿನ ನನ್ನ ಹೇಳಿಕೆ ಮಾಡಿದ್ದಾರೆ ನಂತರ ದಾಖಲು ಮಾಡಿದಾಗಲೂ ನನಗೆ ನೆನಪಿಲ್ಲ. ಆನಂತರ ನಾನು ಎಸಿಬಿ ಕಛೇರಿಗೆ ಹೋಗಿರುವುದು ನೆನಪಿಲ್ಲ. ಗಿರೀಶ್ ಗುತ್ತಿಗೆದಾರರಿಗೆ ನಾನು ಹಣ ಕೊಟ್ಟಿರಲಿಲ್ಲ. ಸ್ವಾದರಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಗಿರೀಶ್ ರವರಿಗೆ ಹಣ ಕೊಡಿ ಎಂದು ಆರೋಪಿ ಕೈಗೆ ಹಣ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಹಣವನ್ನ ಗಿರೀಶ್ ರವರಿಗೆ ಕೊಡಿ ಎಂದು

ಹಿಂದಿರುಗಿಸಲು ಬಂದಾಗ ಅದಕ್ಕೆ ಅವಕಾಶ ಮಾಡದೆ ಕೂಡಲೇ ಎಸಿಬಿ ರವರಿಂದ ಹಿಡಿಸಿದ್ದೇನೆ ಎಂದರೆ ಸರಿಯಲ್ಲ. ಹಣ ತಂದಿದ್ದೀಯ ಎಂದು ಕೇಳಿದ್ದೀಯ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲಿ ನಿಂತು ಸಿಗ್ನಲ್ ನೀಡಿದ್ದೆ ಎಂಬುದರ ಬಗ್ಗೆ ಮಹಜರಲ್ಲಿ ಬರೆಸಿದ್ದೇನೊ ಇಲ್ಲವೊ ನನಗೆ ಗೊತ್ತಿಲ್ಲ. ನಾನು ಯಾವುದೇ ಸಿಗ್ನಲ್ ಕೊಡಿಸದೇ ಕೂಡಲೇ ಎಸಿಬಿ ರವರನ್ನ ಕರೆದುಕೊಂಡು ಹೋಗಿ ಹಿಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಡನ್ನಾಗಿ ಆರೋಪಿ ಕೈಗೆ ಹಣ ಇಟ್ಟೆ ಅದರಿಂದಲೇ ಕೈ ತೊಳೆಸಿದಾಗ ಬಣ್ಣ ಬಂದಿದೆ ಎಂದರೆ ಸರಿಯಲ್ಲ. ಆರೋಪಿ ಸದರಿ ಹಣವನ್ನ ಗಿರೀಶ್ ಗೆ ಕೊಡಲು ಹೇಳಿ ಕೊಡಲಾಗಿದೆ ಎಂದು ಪೊಲೀಸರಿಗೆ ಹಾಜರುಪಡಿಸಿದರು ಎಂದರೆ ಸರಿಯಲ್ಲ.

ಆರೋಪಿಯ ಪ್ಯಾಂಟಿನ ಜೇಬು ಯಾವ ಬಣ್ಣದ್ದು ಇತ್ತು ಎಂದು ನನಗೆ ನೆನಪಿಲ್ಲ. ಆರೋಪಿಯ ಪ್ಯಾಂಟ್ ಜೇಬನ್ನ ವಾಶ್ ಮಾಡಿದಾಗ ಅದು ಸಹ ಗುಲಾಬಿ ಬಣ್ಣಕ್ಕೆ ತಿರುಗಿತು. ವಾಶ್ ಮಾಡಿದ ಎಷ್ಟು ಸಮಯಕ್ಕೆ ಪ್ಯಾಂಟನ್ನ ಪ್ಯಾಕ್ ಮಾಡಿದರು ಎಂದು ನೆನಪಿಲ್ಲ. ಒದ್ದೆ ಬಟ್ಟೆಯನ್ನ ಪ್ಯಾಕ್ ಮಾಡಿದರೆ ಬೂಸ್ಟ್ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. Proceedings ನಡೆಯುವಾಗ ಯಾವುದೇ ರೆಕಾರ್ಡ್ ಆಗಿರುವುದಿಲ್ಲ. Voice record ನ್ನ ಸಿಡಿ ಗೆ ವರ್ಗಾಯಿಸಿದ ಪೊಲೀಸ್ ಅಧಿಕಾರಿಯ ಹೆಸರು ನನಗೆ ನೆನಪಿಲ್ಲ. ಯಾವುದೇ voice record ಆಗಿಲ್ಲ ಮತ್ತು ಸಿಡಿಗೆ ವರ್ಗಾಯಿಸಿಲ್ಲ ಆದರೂ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಾದರಿ ಧ್ವನಿಯನ್ನ ಒಂದು ಹಾಳೆಯಲ್ಲಿ ಬರೆದು ತೆಗೆದುಕೊಂಡಿದ್ದರು. ಸದರಿ ಎರಡು ಹಾಳೆಗಳಿಗೆ ಪಂಚರು ಸಹಿ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮತ್ತು ಆರೋಪಿಯ ಮಾದರಿ ಧ್ವನಿಯನ್ನ ದಾಖಲು ಮಾಡಿದ ಹಾಳೆಗಳು ಏನಾದವು ನನಗೆ ಗೊತ್ತಿಲ್ಲ. ಆರೋಪಿಯ ಧ್ವನಿಯನ್ನ ದಾಖಲಿಸಿಕೊಳ್ಳಲು ಆತನ ಯಾವುದೇ ತಕರಾರು ಇಲ್ಲವೊ ಎಂಬುದರ ಬಗ್ಗೆ ಬರೆಸಿಕೊಂಡಿದ್ದರೊ ನನಗೆ ಗೊತ್ತಿಲ್ಲ. ಯಾವುದೇ ಧ್ವನಿಯ ಮಾದರಿಯಾಗಿ ಪಡೆದಿಲ್ಲ ಆದ್ದರಿಂದಲೇ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

8 ಪೊಟೋಗಳನ್ನ ಸಿಬ್ಬಂದಿಯವರೆ ತೆಗೆದರು ಅವರ ಹೆಸರು ಹೇಳಲಾಗುವುದಿಲ್ಲ. ನಿಪಿ-5 ಪೊಟೋಗಳು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುವ ಪೊಟೋಗಳು ಎಂದರೆ ಸರಿಯಲ್ಲ. ಆ ರೀತಿ ಮಾದರಿಯನ್ನ (ನಿಪಿ-6) 2-30 ಗಂಟೆಗೆ ಪ್ರಾರಂಭಿಸಿದರು ಎಷ್ಟು ಗಂಟೆಗೆ ಮುಗಿಸಿದರು ಎಂದು ಜ್ಞಾಪಕದಲ್ಲಿ ಇಲ್ಲ. ಆ ಸಮಯದಲ್ಲಿ ಯಾವುದೇ

ಮಹಜರಾಗಲೀ ಅಥವಾ ಮತ್ತಾವುದೇ ಪ್ರಕ್ರಿಯೆಯಾಗಲೀ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ದಾಖಲಾತಿಗಳನ್ನ (ನಿಪಿ-4) ಸಹಾಯಕ ಅಭಿಯಂತರರು, ತಾಂತ್ರಿಕ ಇವರು ಹಾಜರುಪಡಿಸಿದ್ದಾರೆ ಎಂದರೆ ಸರಿ. ನಿಪಿ-6 ಪುಟ 5 ರಲ್ಲಿ ಅವರು ಸಿಗಲಿಲ್ಲ ನನಗೆ ಅವರ ಎದುರಿಗೆ ಕೊಟ್ಟರೆ ಅವರಿಗೆ ಪೇಮೆಂಟ್ ಮಾಡಕ್ಕಿದೆ ಎಂದು ಟೈಪ್ ಮಾಡಲಾಗಿದ್ದು ಅದು ಯಾವುದರ ಸಂಬಂಧ ಎಂದು ನನಗೆ ಗೊತ್ತಾಗುತ್ತಿಲ್ಲ. ನಿಪಿ-2 ಪುಟ 5 ರಲ್ಲಿ ಈಗ 7 ವರೆ ಕೊಡಬೇಕ ಸಾರ್ ಗಿರಿಯತ್ರ ಕೊಡಬೇಕ ನಿಮ್ಮತ್ರ ಕೊಡಬೇಕ ಸರ್, ನಿಮ್ಮತ್ರ ಕೊಡಿ ಎಂದು ಟೈಪ್ ಆಗಿದೆ. ಅದರ ನಂತರ ಆರೋಪಿ ದುಡ್ಡು ಕೇಳಿರುವ ಬಗ್ಗೆ ನಮೂದು ಯಾವುದು ಇಲ್ಲ ಎಂದರೆ ಸರಿ. ನಾನು ಆರೋಪಿಗೆ ಕೊಟ್ಟೆ ಎಂದು ಹೇಳುವ ಹಣ ಗಿರಿಗೆ ಕೊಡಬೇಕಾಗಿದ್ದ ಹಣ ಎಂದರೆ ಸರಿಯಲ್ಲ. ವಾಣಿಜ್ಯ ಬೆಳೆಗೋಸ್ಕರ ಸ್ಥಾವರ ಪಡೆಯಲು ನಾನು ಕೇಳಿದ್ದೆ ಅದು ಕೊಡಲು ಬರುವುದಿಲ್ಲ ಎಂದು ಹೇಳಿದಕ್ಕಾಗಿ ಅವರ ಮೇಲೆ ಒತ್ತಡ ಹಾಕಿ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೆಲಸದ ಸಂಬಂಧ ಆರೋಪಿ ಯಾವಾಗಲು ಹಣ ಕೇಳಿಲ್ಲ ಮತ್ತು ಪಡೆದಿಲ್ಲ ಎಂದರೆ ಸರಿಯಲ್ಲ. ಫೈಲ್ ಆರೋಪಿ ಹತ್ತಿರ ಬರುವ ಹಂತಕ್ಕೆ ಇನ್ನು ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪನ್ನು ಮುಚ್ಚಿಡುವ ಸಲುವಾಗಿ ಆರೊಪಿ ಮೇಲೆ ಕೇಸು ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.